ಜೆಎಸ್‌ಎಸ್ ಮಹಾವಿದ್ಯಾಪೀಠ
ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು
(ಮೈಸೂರು ವಿಶ್ವವಿದ್ಯಾನಿಲಯದಿಂದ ಸ್ವಾಯತ್ತತೆ ಪಡೆದಿದೆ ⋆ ನ್ಯಾಕ್‌ನಿಂದ 'ಎ' ದರ್ಜೆ ಮಾನ್ಯತೆ ಪಡೆದಿದೆ)
'ಉತ್ಕೃಷ್ಟತಾ ಅಂತಃಸಾಮರ್ಥ್ಯ ಉಳ್ಳ' ಕಾಲೇಜು ಎಂದು ಯುಜಿಸಿಯಿಂದ ಗುರುತಿಸಲ್ಪಟ್ಟಿದೆ
ಊಟಿರಸ್ತೆ, ಮೈಸೂರು-570 025, ಕರ್ನಾಟಕ

☎ 0821-2548236 & 2548380 Fax: 0821-2548238 E-mail: jssautonomous@gmail.com

ದಿನಾಂಕ 29.12.2016

## ಪ್ರಕಟಣೆಯ ಕೃಪೆಗಾಗಿ

## ಸ್ತ್ರೀ ಸಮಾನತೆ ಎಂಬುದು ನೀಡುವ ವಸ್ತುವಲ್ಲ

– ಡಾ. ಜ್ಯೋತಿಶಂಕರ್

'ಹೆಣ್ಣಿಗೆ ಬೇಕಾದ ಸಮಾನತೆಯ ಹಕ್ಕು ಯಾರ ಸ್ವತ್ತಲ್ಲ. ಅದನ್ನು ಮತ್ತೊಬ್ಬರು ನೀಡಬೇಕಾದ ಅಗತ್ಯವೂ ಇಲ್ಲ ಹಾಗೂ ನೀಡುವ ವಸ್ತುವೂ ಅಲ್ಲ. ತನ್ನ ಸಾಧನೆಯಿಂದ, ಸುಂದರ ಬದುಕಿನ ನಿರ್ವಹಣೆಯಿಂದ, ಸುಖ ಸಂಸಾರ ರೂಪಿಸಿಕೊಳ್ಳುವ ಕುಶಲತೆಯಿಂದ ಅವಳು ಸಮಾನತೆಯ ಹಕ್ಕನ್ನು ಸಂಪಾದಿಸಿಕೊಳ್ಳಬಲ್ಲಳು' ಎಂದು ಕರ್ನಾಟಕ ಮುಕ್ತ ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾದ ಡಾ. ಜ್ಯೋತಿಶಂಕರ್ ಅವರು ಅಭಿಪ್ರಾಯಪಟ್ಟರು.

ಶರಣ ಸಾಹಿತ್ಯ ಪರಿಷತ್ತಿನ ಮೈಸೂರು ನಗರ ಘಟಕದ ಆಶ್ರಯದಲ್ಲಿ ಬಿ.ಎನ್ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನ ಮಹಿಳಾ ಪ್ರಸಾದ ನಿಲಯದಲ್ಲಿ ನಡೆದ 'ಸ್ತ್ರೀ ಸಮಾನತೆಯ ಹಕ್ಕು ಸುಖ ಸಂಸಾರಕ್ಕೆ ದಾರಿ' ಎಂಬ ವಿಷಯ ಕುರಿತ ಚರ್ಚಾಸ್ಪರ್ಧೆಯ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಅವರು ಮಾತನಾಡುತ್ತಿದ್ದರು. 'ವಚನಕಾರರ ಜೀವನ ಕ್ರಮ, ವೇದಕಾಲದ ಸಮಾಜ ಹೆಣ್ಣುಮಕ್ಕಳಿಗೆ ನೀಡಿದ್ದ ಗೌರವಾದರಗಳು, ಪ್ರಸ್ತುತ ಜೀವನ ಕ್ರಮದಲ್ಲಿ ಹೆಣ್ಣು ಮಕ್ಕಳು ಮಾಡುತ್ತಿರುವ ಸಾಧನೆಗಳು ಸ್ತ್ರೀ ತನ್ನ ಬದುಕನ್ನು ತಾನೆ ಕಟ್ಟಿಕೊಳ್ಳಬೇಕೆಂಬುದನ್ನು ತಿಳಿಸುತ್ತವೆ' ಎಂದರು

ಕಾರ್ಯಕ್ರಮದ ಉದ್ಘಾಟನೆಯನ್ನು ನೆರವೇರಿಸಿ ಉದ್ಘಾಟನಾ ಭಾಷಣ ಮಾಡಿದ ಕಾಲೇಜು ಸಮುಚ್ಚಯದ ಮುಖ್ಯ ಕಾರ್ಯನಿರ್ವಾಹಕರಾದ ಪ್ರೊ. ಬಿ.ವಿ. ಸಾಂಬಶಿವಯ್ಯನವರು 'ಭಾರತೀಯ ಸಮಾಜದಲ್ಲಿ ಹೆಣ್ಣಿಗೆ ಅತಿ ಮುಖ್ಯ ಸ್ಥಾನವಿದೆ. ಭಾರತದ ಇತಿಹಾಸ ಮತ್ತು ಪರಂಪರೆಯನ್ನು ಅವಲೋಕಿಸಿದಾಗ ಇದು ವೇದ್ಯವಾಗುತ್ತದೆ. ಅಂತೆಯೇ ಸ್ತ್ರೀ ಎಂಬ ಕಾರಣದಿಂದಲೇ ಶೋಷಣೆಗಳೂ ನಡೆದಿವೆ. ಶೋಷಣೆಯನ್ನು ಕೊನೆಗಾಣಿಸುವ ಸಲುವಾಗಿಯೇ ನಮ್ಮ ಸಂವಿಧಾನವೂ ಆಕೆಗೆ ಅತೀ ಮುಖ್ಯವಾದ ಹಕ್ಕುಗಳನ್ನು ನಿಡಿದೆ. ಆದರೆ ಅವುಗಳ ಬಗ್ಗೆ ಅರಿವಿಲ್ಲದಿರುವುದು ಮತ್ತು ಅವುಗಳನ್ನು ಸಮರ್ಥವಾಗಿ ಬಳಸಿಕೊಳ್ಳದಿರುವುದು ಕಂಡು ಬರುತ್ತಿದೆ. ಈ ವಿಷಯದಲ್ಲಿ ಜಾಗೃತಿ ಮೂಡಬೇಕಿದೆ. ಸಂಸಾರ ನಿರ್ವಹಣೆಯಲ್ಲಿ ಹೆಣ್ಣು ಮತ್ತು ಗಂಡುಗಳೀರ್ವರೂ ಮುಖ್ಯ. ಪರಸ್ಪರರಲ್ಲಿ ಹಕ್ಕಿನ ಪ್ರತಿಪಾಧನೆ ಶೋಷಣೆಯಲ್ಲಿ ನಡೆಯುತ್ತಿದೆ. ಸ್ತ್ರೀಗೂ ಸಮಾನತೆಯ ಹಕ್ಕಿರಲಿ, ಅಂತೆಯೇ ಪುರುಷನಿಗೂ ಮಾನ್ಯತೆ ಸಿಗಲಿ' ಎಂದರು.

ಬಹುಮಾನ ವಿತರಿಸಿ ಮಾತನಾಡಿದ ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯದರ್ಶಿಗಳಾದ ಶ್ರೀ ಎಸ್ ಶಿವಕುಮಾರಸ್ವಾಮಿಯವರು 'ಹೆಣ್ಣು ಸಂಸಾರದ ಕಣ್ಣು. ಹೆಣ್ಣಿನಿಂದಲೇ ಇಹವು, ಹೆಣ್ಣಿನಿಂದಲೇ ಪರವು, ಹಣ್ಣಿನಿಂದಲೇ ಸಕಲ ಸಂಪದವು ಎಂದು ನಮ್ಮ ಭಾರತೀಯ ಸಮಾಜ ಭಾವಿಸುತ್ತದೆ. ಹೆಣ್ಣಿಗೆ ನೀಡಿರುವ ಈ ಪ್ರಾಮುಖ್ಯತೆಯನ್ನು ಹೆಣ್ಣು ಮಕ್ಕಳು ಸದುಪಯೋಗ ಪಡಿಸಿಕೊಳ್ಳಬೇಕು" ಎಂದು ಕರೆನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಶ್ರೀ ಗೊ.ರು. ಪರಮೇಶ್ವರಪ್ಪನವರು 'ವಚನಕಾರ್ತಿಯರ ಜೀವನಕ್ರಮದಲ್ಲಿ ಕಂಡು ಬರುವ ಕಾಯಕನಿಷ್ಠೆ, ಆತ್ಮಾಭಿಮಾನ, ಸಿರಿಗೆ ಮಾರು ಹೋಗದ ಸ್ಥಿತಪ್ರಜ್ಞತೆ, ದೈವಭಕ್ತಿ, ಸಂಸ್ಕಾರಯುತ ಜೀವನ ಕ್ರಮ ಪ್ರಪಂಚಕ್ಕೆ ಮಾದರಿಯಾದುದು' ಎಂದು ಹೇಳಿದರು.

ಚರ್ಚಾಸ್ಪರ್ಧೆಯಲ್ಲಿ ಪ್ರಥಮ ಎಂ.ಎ. ವಿದ್ಯಾರ್ಥಿನಿ ಸಿಂಧು ಪ್ರಥಮ, ಪ್ರಥಮ ಪಿ.ಯು.ಸಿ. ವಿದ್ಯಾರ್ಥಿನಿ ಅದಿತಿ ದ್ವಿತೀಯ ಮತ್ತು ಪ್ರಥಮ ಬಿ.ವೊಕ್ ವಿದ್ಯಾರ್ಥಿನಿ ಛಾಯಾ ತೃತೀಯ ಬಹುಮಾನ ಪಡೆದರು.

ವಿದ್ಯಾರ್ಥಿನಿಲಯದ ಮೇಲ್ವಿಚಾರಕರಾದ ಕು. ಹೇಮ ಸ್ವಾಗತಿಸಿದರು. ಕು. ವಿದ್ಯಾಶ್ರೀ ಪ್ರಾರ್ಥಿಸಿದರು. ಉಪನ್ಯಾಸಕಿಯರಾದ ಕು. ಪುಷ್ಪ ವಂದಿಸಿದರು, ಕು. ಶ್ವೇತಾ ನಿರೂಪಿಸಿದರು. ಡಾ. ಸರೋಜಮ್ಮಣ್ಣಿ, ಶ್ರೀಮತಿ ಸುಜಾತಕುಮಾರಿ ಮತ್ತು ಶ್ರೀ ಶಿವಶಂಕರ್ ತೀರ್ಪುಗಾರರಾಗಿ ಆಗಮಿಸಿದ್ದರು. ಶರಣ ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿಗಳಾದ ಮಹಾದೇವಪ್ಪ, ಶ್ರೀ ಪುಟ್ಟರಾಜು, ಅವರು ಉಪಸ್ಥಿತರಿದ್ದರು.

ಗೆ,

ಸಂಪಾದಕರು

____________________

____________________

ಪ್ರಾಂಶುಪಾಲರು
ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು
ಊಟಿ ರಸ್ತೆ, ಮೈಸೂರು-25